# ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ.

## ಸಿ.ಸಿ.ನಂ. 1133/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಸುರೇಶ |
| ತಂದೆಯ ಹೆಸರು | : | ಸುಬ್ಬೇಗೌಡ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಹಿರಿಯ ತಜ್ಞರು, ಸಾರ್ವಜನಿಕ ಆಸ್ಪತ್ರೆ, ನಂಜನಗೂಡು. |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 10.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸ. ಸ. ಅ. ರವರಿಂದಃ**

ನಾನು 2017 ರಿಂದ ಇಲ್ಲಿಯವರೆಗೆ ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 03.09.2017 ರಂದು ನಾನು ಆಸ್ಪತ್ರೆಯಲ್ಲಿರುವಾಗ ಚಾಸಾ-5 ರವರು ಚಾಸಾ-1 ರವರನ್ನು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಆಸ್ಪತ್ರೆಗೆ ಬಂದಿರುತ್ತಾರೆ. ಅವರನ್ನು ಪರೀಕ್ಷೆ ಮಾಡಿ ನೋಡಲಾಗಿ, ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1) ಮುಖ ಮತ್ತು ಎದೆಯ ಭಾಗದಲ್ಲಿ ತರಚಿದ ಗಾಯಗಳು (Abrasion over the face and chest)

2) ಮೂಗಿನಲ್ಲಿ ಒಳಏಟು (Blunt injury to nesal region).

3) ಮೂಗಿನ ಎರಡು ಒಳ್ಳೆಗಳಲ್ಲಿ ರಕ್ತಸ್ರಾವ (Blood bleeding over nesal)

ಈ ಮೇಲ್ಕಂಡ ಗಾಯಗಳಿಗೆ ಸಂಬಂಧಿಸಿದಂತೆ ನಾನು ಪ್ರಾಥಮಿಕ ಚಿಕಿತ್ಸೆ ನೀಡಿ, ಮುಂದಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ಶಿಫಾರಸ್ಸು ಮಾಡಿರುತ್ತೇನೆ. ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿ ನನ್ನ ಮುಂದೆ ಹಾಜರುಪಡಿಸಿದ ಸಿ.ಟಿ ಸ್ಕ್ಯಾನ್ ವರದಿಯನ್ನು ಪರಿಶೀಲಿಸಿದಾಗ ಮೂಗಿನ ಬಲಭಾಗದ ಒಳಭಾಗದಲ್ಲಿ ಮೂಳೆ ಮುರಿತ ಮತ್ತು ಕಣ್ಣಿನ ಬಲಭಾಗದ ಮೂಳೆ ಮುರಿತವಾಗಿರುವುದು ಕಂಡುಬಂದಿರುತ್ತದೆ. ನಾನು ಈ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣಪತ್ರವನ್ನು ನೋಡಿ ಗುರುತಿಸಿದ್ದರಿಂದ, ಅದನ್ನು **ನಿ.ಪಿ-5** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ-5(ಎ)** ಎಂದು ಗುರುತಿಸಲಾಯಿತು. ಈ ಮೇಲೆ ಹೇಳಿರುವ ಗಾಯಗಳು ತೀವ್ರ ಸ್ವರೂಪದ ಮತ್ತು ತಾಜಾಸ್ವರೂಪದ ಗಾಯಗಳಾಗಿರುತ್ತವೆ. ಒಬ್ಬ ವ್ಯಕ್ತಿ ಮುಷ್ಠಿ ಮಾಡಿ ಮತ್ತೊಬ್ಬ ವ್ಯಕ್ತಿಯ ಮುಖಕ್ಕೆ, ಮೂಗಿಗೆ ಮತ್ತು ಕಣ್ಣಿನ ಭಾಗಕ್ಕೆ ಹಲ್ಲೆ ಮಾಡಿದಾಗ ಈ ಮೇಲೆ ಹೇಳಿದಂತಹ ಗಾಯಗಳಾಗುವ ಸಾಧ್ಯತೆಗಳಿರುತ್ತವೆ.

**<u>ಪಾಟೀಸವಾಲುಃ ಆರೋಪಿ ಪರ ಶ್ರೀ ಎಂ.ಸಿ.ಎಸ್, ವಕೀಲರಿಂದಃ</u>**

ಗಾಯಾಳು ನಮ್ಮ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ. ಅವರನ್ನು ಒಳರೋಗಿಯನ್ನಾಗಿ ದಾಖಲು ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಅವರಿಗೆ ತೀವ್ರ ತರಹದ ಗಾಯಗಳಾಗಿದ್ದರಿಂದ ಮೈಸೂರಿನ ಆಸ್ಪತ್ರೆಗೆ ಶಿಫಾರಸ್ಸು ಮಾಡಿರುತ್ತೇನೆ. ಸದರಿ ಗಾಯಗಳು 1-2 ಗಂಟೆ ಅವಧಿಯ ನಡುವೆ ಆಗಿರುತ್ತವೆ. ಗಾಯದ ಪ್ರಮಾಣಪತ್ರದಲ್ಲಿ ಗಾಯದ ಅವಧಿಯನ್ನು ನಮೂದಿಸಿಲ್ಲ. ನಾನು ಪರೀಕ್ಷೆ ಮಾಡುವಾಗ ರಕ್ತ ಸುರಿಯುತ್ತಿದ್ದರಿಂದ ಅದನ್ನು ನಮೂದಿಸುವ ಅವಶ್ಯಕತೆ ಇರುವುದಿಲ್ಲ. ನಾನು ಪರೀಕ್ಷೆ ಮಾಡುವ ಸಮಯದಲ್ಲಿ ನಿರಂತರವಾಗಿ ರಕ್ತ ಸುರಿಯುತ್ತಿತ್ತು. ಆ ಸಂದರ್ಭದಲ್ಲಿ ರಕ್ತ ಹೆಪ್ಪುಗಟ್ಟಿರಲಿಲ್ಲ. ಸಾಮಾನ್ಯವಾಗಿ 10-15 ನಿಮಿಷದಲ್ಲಿ ರಕ್ತ ಹೆಪ್ಪುಗಟ್ಟುತ್ತದೆ, ಆದರೆ ಸದರಿ

ಹೆಪ್ಪುಗಟ್ಟುವಿಕೆ ಒಬ್ಬ ವ್ಯಕ್ತಿಗೆ ಆಗಿರುವ ಗಾಯದ ಮೇಲೆ ಅವಲಂಭಿಸಿರುತ್ತದೆ. ನಾನು ಚರ್ಮರೋಗ ತಜ್ಞನಾಗಿರುತ್ತೇನೆ. ಯಾವ ವೈದ್ಯರು ಸಿ.ಟಿ ಸ್ಕ್ಯಾನ್ ಮಾಡಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ, ಆದರೆ ನನಗೆ ತಂದು ತೋರಿಸಿದ ವರದಿ ಆಧಾರದ ಮೇಲೆ ಪರೀಕ್ಷೆ ಮಾಡಿರುತ್ತೇನೆ. ನಾನು ಪೊಲೀಸರ ಕೋರಿಕೆಯ ಮೇರೆಗೆ ನನ್ನ ಅಭಿಪ್ರಾಯ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಒರಟಾದ ನೆಲದ ಮೇಲೆ ಬಿದ್ದಾಗ ಗಾಯದ ಪ್ರಮಾಣಪತ್ರದಲ್ಲಿ ನಮೂದಿಸಿರುವ ಗಾಯಗಳಾಗುವ ಸಾಧ್ಯತೆಗಳಿರುತ್ತವೆ ಎಂದರೆ ಸರಿ.

**ಮರುವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**